# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ಕಾರ್ಯಾಲಯ, ನಂಜನಗೂಡು

**ಓ ಎಸ್ ನಂ. 270-2018** **ಪಿ . ಡಬ್ಲುಃ 1**

| | |
|---|---|
| ಸಾಕ್ಷಿದಾರರ ಹೆಸರು<br>ವಯಸ್ಸು<br>ಉದ್ಯೋಗ<br>ವಾಸ್ತವ್ಯ | ಡಿ. ಎಂ ಶೇಖರಪ್ಪ<br>60 ವರ್ಷ<br>ವ್ಯವಸಾಯ<br>ತಿ.ನರಸೀಪುರ |
| | **ಸತ್ಯ ಪ್ರತಿಜ್ಞೆಯ** ಮೇರೆಗೆ **ದಿನಾಂಕ** 29-11-2019. |

**ಮುಖ್ಯ ವಿಚಾರಣೆಃ ವಾದಿ ಪರ ವಕೀಲರಾದ ಶ್ರೀ ಎಂ.ಬಿ.ಎಂ ವಕೀಲರಿಂದಃ-**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿದ್ದು ಅದನ್ನು ನಾನೇ ಹೇಳಿ ಬರೆಯಿಸಿ ಸಹಿ ಮಾಡಿರುತ್ತೇನೆ.

ದಾವಾ ಆಸ್ತಿಗೆ ಸಂಬಂಧಪಟ್ಟಂತೆ ನಾನು ಈಗ 3 ಆರ್.ಟಿ.ಸಿ ಗಳನ್ನು ಹಾಜರುಪಡಿಸುತ್ತಿದ್ದು ಅವುಗಳನ್ನು ಕ್ರಮವಾಗಿ ನಿಪಿ-1 ರಿಂದ 3 ಎಂದು, ದಿಃ25-02-2017 ರ ಕಂದಾಯ ರಶೀದಿಯನ್ನು ಹಾಜರುಪಡಿಸುತ್ತಿದ್ದು ಅದನ್ನು ನಿಪಿ-4 ಎಂದು ದಾವಾ ಆಸ್ತಿಗೆ ಸಂಬಂಧಪಟ್ಟಂತೆ ನಾನು ಈಗ 3 ಹದ್ದುಬಸ್ತು ನಕ್ಷೆಗಳನ್ನು ಹಾಜರುಪಡಿಸುತ್ತಿದ್ದು ಅವುಗಳನ್ನು ಕ್ರಮವಾಗಿ ನಿಪಿ-5 ರಿಂದ 7 ಎಂದು, ನಾನು ನನ್ನ ವಕೀಲರ ಮೂಲಕ ಪ್ರತಿವಾದಿಗಳಿಗೆ ಕಳುಹಿಸಿದ ಲೀಗಲ್ ನೋಟಿಸ್ ನ್ನು ಹಾಜುರುಪಡಿಸುತ್ತಿದ್ದು ಅದನ್ನು ನಿಪಿ-8 ಎಂದು, ದಿಃ04-04-2018 ರಂದು ಪ್ರತಿವಾದಿಗಳು ಕಳುಹಿಸಿದ ಜವಾಬು ನೋಟೀಸ್ ಪತ್ರವನ್ನು ಹಾಜರುಪಡಿಸುತ್ತಿದ್ದು ಅದನ್ನು ನಿಪಿ-9 ಎಂದು ಗುರುತಿಸಲಾಯಿತು, ದಾವಾ ಸ್ವತ್ತಿಗೆ ಸಂಬಂದಿಸಿದಂತೆ ದಿಃ14-06-2012 ರ ಶುದ್ಧ ಕ್ರಯ ಪತ್ರವನ್ನು ಹಾಜರುಪಡಿಸುತ್ತಿದ್ದು ಅದನ್ನು ನಿಪಿ-10 ಎಂದು ಗುರುತಿಸಲಾಯಿತು.

(ಮುಂದುವರಿದ ಮುಖ್ಯ ವಿಚಾರಣೆಗೆ ವಕೀಲರು ಸಮಯಾವಕಾಶವನ್ನು ಕೇಳಿರುವುದರಿಂದ ಸಮಯಾವಕಾಶವನ್ನು ನೀಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**2 ನೇ ಪ್ರ.ದ. ನ್ಯಾ ದಂ. ನಂಜನಗೂಡು**